ಸಾಕ್ಷಿಯನ್ನು ದಿ: 24.06.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನಾನು ಕಳೆದ ನ್ಯಾಯಾಲಯದ ಮುದ್ದತಿನಲ್ಲಿ ತಿಳಿಸಿದಂತೆ ಮೂಲ ದಾಖಲೆಗಳನ್ನು ಪಡೆಯಲು ಅರ್ಜಿ ಸಲ್ಲಿಸಿದ್ದೇನೆ. ಸದರಿ ದಾಖಲೆಗಳನ್ನು ಪಡೆದ ನಂತರ ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆಯಿಲ್ಲ. ನನ್ನ ತಂದೆಯವರು ಅವರ ಸೋದರಮಾವನಾದ ದೊಳ್ಳೇಗೌಡ ಉಃ ಸಿದ್ದೇಗೌಡರ ಮನೆಗೆ ದತ್ತು ಹೋಗಿದ್ದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ದತ್ತುಪತ್ರವನ್ನು ಮಾಡಿರುವುದಿಲ್ಲ.
2. ನನ್ನ ತಾಯಿಯನ್ನು ದೊಳ್ಳೇಗೌಡ ಉಃ ಸಿದ್ದೇಗೌಡರ ಹೆಂಡತಿಯಾದ ದೇವಮ್ಮರವರು ದತ್ತು ತೆಗೆದುಕೊಂಡಿದ್ದರು. ದೊಳ್ಳೇಗೌಡ ಹಾಗೂ ದೇವಮ್ಮನವರಿಗೆ ಮಕ್ಕಳು ಇಲ್ಲದಿದ್ದರಿಂದ ಇಬ್ಬರ ಕಡೆಯಿಂದಲೂ ಒಬ್ಬೊಬ್ಬ ಮಗುವನ್ನು ದತ್ತು ತೆಗೆದುಕೊಂಡಿರುತ್ತಾರೆ. ನನ್ನ ತಂದೆ ತಾಯಿ ದತ್ತು ಹೋಗಿರುವ ವಿಚಾರಕ್ಕೆ ಸಂಬಂಧಿಸಿ ದಾಖಲೆಯಿರುವುದಿಲ್ಲ.
3. ದಾವಾ ಆಸ್ತಿಗಳು ನನ್ನ ತಂದೆ ತಾಯಿಯ ದತ್ತು ಪೋಷಕರಿಗೆ ಸೇರಿದ್ದು ಎಂದು ತೋರಿಸಲು ದಾಖಲೆ ಇರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಂಬಂಧಪಟ್ಟ ಕಛೇರಿಯಿಂದ ಪಡೆದು ಹಾಜರು ಪಡಿಸಲು ತೊಂದರೆಯಿರುವುದಿಲ್ಲ ಎಂದರೆ ಸಾಕ್ಷಿಯು ಸಿಕ್ಕಿದರೆ ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಹುಡುಕಲು ಪ್ರಯತ್ನ ಪಟ್ಟಿರುವುದಿಲ್ಲ. ದಾವಾ ಆಸ್ತಿಗಳು ನನ್ನ ತಂದೆ ತಾಯಿಗೆ ಅವರ ದತ್ತು ಪೋಷಕರಿಂದ ಬಂದಿವೆ ಎಂದು ತೋರಿಸಲು ಪಹಣಿ ಪತ್ರಿಕೆಗಳು ಇವೆ. ಸದರಿ ಪಹಣಿ ಪತ್ರಿಕೆಗಳು 2013 ನೇ ಸಾಲಿನ ದಾಖಲೆಗಳಾಗಿದ್ದು, ಅದಕ್ಕಿಂತ ಹಿಂದಿನ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆಯಿಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ